

ಶಿಕಾರಿಪುರ ಪಟ್ಟಣದ ಪ್ರಸಿದ್ಧ ಹುಚ್ಚರಾಯಸ್ವಾಮಿ ದೇವರ ಬ್ರಹ್ಮ ರಥೋತ್ಸವ

ಇಡಾಕಿ ಹೆಂಗೆ ಪ್ಯಾನ್ಸಿ ಮಾತಾಡ್ತಾಳಿಕೆ ಅಂತ ಮಾತಾಡ್ಕಂಡು ನಗಾದು. ಅವ್ವಾ. ಜನಾ... ಜನ ಟಿಕೇಟು ಸಿಗ್ತಾವೊಯಿಲ್ಲೊ ಅಂತ ಗಾಬ್ರಿ ಗಾಬ್ರಿ. ಒಟ್ಟು ಎಂಟು ಜನ, ಇಬ್ರು ಸಣ್ಣ ಹುಡ್ರು ಅಂತಾ ಆರು ಟಿಕೇಟು ತಗಂಡು ಒಳಗೋಗಾಕೆ ಹೋದ್ರೆ ಆ ವಣ್ಣ ಬಿಡ್ಲೆಯಿಲ್ಲ ಆ ಹುಡ್ರು ದೊಡ್ಡೊವದಾವೆ ಇನ್ನೂ ಎಲ್ಡು ಟಿಕೇಟು ಬೇಕು ಅನ್ನಾಕತ್ತಿದ್ದ. ಅಯ್ಯೋ ಬಿಡಪ್ಪ ಇವ್ರಿಗೆ ಇನ್ನೂ ಎಲ್ಡ್ಮೂರು ವರ್ಷ ಅಂತ ಒಬ್ಬಾಕಿನ ಎತ್ಕಂಡು ಸೆರಗು ಹೊಚ್ಕೊಂಡು, ಇನ್ನೊಬ್ಬಾಕೀನ ಕೈಯಾಗೆ ಎಳ್ಕಂಡು ಒಳಾಗೆ ಹೋಗೆಬಿಡ್ತು. ಹಿಂದ್ಲಿಂದ ನಾವೂ ಹೋದ್ವಿ. ಊರುಗುಳಿಗೆ ಹೋಗಾಬೇಕಾರೂ ಬಸ್ಸು ಟಿಕೇಟಿಗೆ ಅವ್ವ ಹಿಂಗೆ ಮಾಡಾದು. ಸಿನ್ಮಾ ಶುರುವಾಗಿದ್ದೆ ತಡ ಬ್ಯಾರೆ ಲೋಕಕ್ಕೆ ಹೋದ್ವಿ. ಮಧ್ಯಂತರ ವಿರಾಮದಾಗೆ ಹುರದಿರೊ ಸೇಂಗ ತಿಂದು ಹೊರಾಗ್ಬಂದು ರಾಜ್ಕುಮಾರ್ ಎಷ್ಟು ಚೆಂದ ಕಾಣ್ತಾನವ್ವ. ತಾಯಂದ್ರೀಗೆ ಇಂತಾ ಮಗ ಇರಬಾರ್ದಾ ಅನ್ನಿಸ್ತೇತಿ, ಅಕ್ಕತಂಗೇರಿಗೆ ಇಂಥಾ ಅಣ್ಣ ಇರಬಾರ್ದಾ ಅನ್ನಿಸ್ತೇತಿ, ಹುಡಿಗೇರಿಗೆ ಇಂಥ ಗಂಡ ಸಿಗಬೇಕೂ ಅನ್ನಿಸ್ತೇತಿ. ಹಿಂಗೆಲ್ಲಾ ಮಾತಾಡಿ ಮತ್ತೆ ಒಳಗೋಗಿ ಕುತ್ಕಂಡು ಸಿನ್ಮ ನೋಡಾಬೆಕಾರೆ, ಹೊಡೆದಾಟ್ದ ಸೀನ್ನಾಗೆ ನನ್ನ ಪಕ್ಕದಾಗೆ ಕುಂತೇಕಿ ದಬದಬಾಂತ ಗುದ್ದಾಕತ್ತಾಳೆ.

ಸುಮ್ಕಿರೆ... ನಂಗ್ಯಾಕೆ ಹೊಡಿಯಾಕತ್ತಿ ಅಂತ ಬೈದಮ್ಯಾಗೆ ಸಿಟ್ಟಿಂದ ಮುಖ ನೋಡಿ ಸುಮ್ಕಾದ್ಲು. ಸಿನ್ಮ ಮುಗಿಸಿ ಹೊರಾಗೆ ಬಂದ್ರೆ ಆಗ್ಲೆ ಹೊತ್ತು ಮುಳುಗಂಗಾಗಿತ್ತು. ಒಡಬಡ ಪಕ್ಕಾಗಿರೊ ಹೋಟ್ಲಿಗೋಗಿ ಕಾಫಿ ಕುಡ್ದು, ಆ ಕಡಿ ಜಯಶ್ರೀ ಟೆಂಟ್ ಹತ್ರ ಇರೊ ಬಯಲೊಳ್ಗೆ ನಾಟ್ಕದ ಕಂಪ್ನಿ ಬಂದಿತ್ತು. ದೊಡ್ಡಣ್ಣಯ್ಯ ಎಲ್ರಿಗೂ ಟಿಕೇಟು ತಗ್ಸಿದ. ನೆಲಕ್ಕೆ ಎಂಟಾಣೆ. ಈಚ್ಲು ಚಾಪೆ ಹಾಸಿದ್ರು. ಹೋಗಿ ಜಾಗ ಹಿಡ್ಕಂಡು, ಇದಿಷ್ಟು ನಮ್ದು ಅನ್ನೊಹಂಗೆ ಕುಂತ್ವಿ. ರಾಯಣ್ಣನ ವೀರಾವೇಶದ ಮಾತುಗುಳು, ಅವ್ರ ತಾಯೀಗೆ ಬ್ರಿಟೀಸರು ಕೊಡೊ ಕಷ್ಟ ನೋಡಿ ಐದತ್ತು ಪೈಸಾಗಳ್ನ ಸ್ಟೇಜಿಗೆ ಒಗುದ್ವಿ. ಇದ್ದಂತೋರು ಜಾಸ್ತಿನೆ ಒಗಿತಿದ್ರು. ಖಾರ ಮಂಡಕ್ಕಿ ಕಟ್ಟಿಸಿದ್ವಿ. ತಿನ್ಕಂತಾ ನಾಟ್ಕ ಮುಗಿದಿದ್ದೆ ತಿಳೀಲಿಲ್ಲ. ಆಗ್ಲೆ ಹತ್ತಾತು, ಹೊಂಡ್ರಿ, ಹೊಂಡ್ರಿ ಅಂತ ಸಣ್ಣಣ್ಣಯ್ಯ ಹೇಳ್ತಾಯಿದ್ದ. ಎಲ್ರೂ ಗಾಡಿ ಬಿಟ್ಟ ಜಾಗಕ್ಕೆ ಹೋಗೋದ್ರಾಗೆ ಲಕ್ಮಣ್ಣ, ಎತ್ತುಗಳ್ನ ಕಟ್ಟಿ ಬಾರಿಕೋಲು ಹಿಡ್ಡಿದ್ದ. ಗಾಡಿ ಹತ್ತಿ ಹೊಂಡುತಿದ್ದಂತೆ ಮಾತೊಮಾತು. ಸಿನಿಮಾದ್ದು, ನಾಟ್ಕುದ್ದು ಯಾರು ಭೂಮಿಮ್ಯಾಗೆ ಇರ್ಲಿಲ್ಲ. ಹೊಳಿಸೇತುವೆ ದಾಟಿ ಗೌರಿಹಳ್ಳ ಬರ್ತಿದ್ದಂಗೆ ಏ... ಮಾತಾಡಬ್ಯಾಡ್ರಿ. ಸುಮ್ಕೆ ಕುಂತ್ಕಳ್ರಿ, ಹಿಂಗೆ ಗಾಡಿಮ್ಯಾಲೆ ಬರೋರನ್ನ ತರುಬಿ ಹಕ್ಕಂಡಿರೊ ಬಂಗಾರನ್ನೆಲ್ಲಾ ಇಸ್ಕಂಡು ಓಡಿ ಹೋದ್ರಂತೆ. ಕುಟ್ರಳ್ಳಿ ಪಾರಂ ಬರೊವರ್ಗೂ ಉಸರೆತ್ತಬ್ಯಾಡ್ರಿ ಅಪ್ಪ ಬೈದು ಹೇಳ್ತು. ಆವಾಗ ದುಪ್ಟಿ ಹೊಚ್ಕೊಂಡು ಮುಲ್ಡಕ್ಕಂಡು ಮಕ್ಕಂಡೋರು ಊರು ಬಂದ ಮ್ಯಾಲೆ ಎದ್ದಿದ್ದು.

ಮಾರ್ನೋಮಿ ಮತ್ತೆ ದೀಪಾವಳಿ ಮಧ್ಯೆ ಬರೊ ಹುಣ್ಣಿಮೆಗೆ ಭೂಮುಣ್ಣಿಮೆ ಅಂತಾರೆ. ಇಡಿ ಊರಿಗೆ ಬರೋಬ್ಬರಿ ಕುಶಿ. ಭತ್ತದ ಬೆಳೆ ಚೆನ್ನಾಗಿ ಬೆಳೆದು ಕಾಯ್ಕಟ್ಟಿರೊ ಕಾಲ. ಆಗ ಭೂಮಿ ಬಸುರಿಯಾಗಿ ಬಯಕೆಗಳು ಕಾಡೊಕಾಲ. ಬಯಕೆಗಳನ್ನು ತೀರ್ಸೊದೆ ಈ ಹಬ್ಬ. ಮನ್ಯಾಗಿರೊ ಚಿಬ್ಲು ಬುಟ್ಟಿ, ಕೆರ್ಸಿ, ಕೇರೊಮರ, ಚಿಬ್ಲ ಎಲ್ಲದನ್ನು ಒಂದರೊಳಗೊಂದು ಹಾಕ್ಕೊಂಡು ತುಂಬೆಕೆರೆಗೋಗಿ ತೊಳ್ಕಂಡು ಬರ್ಬೆಕು. ಎಲ್ಲಾ ತರದ ತರ್ಕಾರಿಗಳು, ಹಣ್ಣು ಕಾಯ್ಗಳು, ಸೊಪ್ಪುಗಳ್ನ ಕಿತ್ಕೊಂಡು ಬರ್ಬೇಕು. ಒಂದಿಲ್ಲಾಂದ್ರೆ ಆಗಲ್ಲ. ಅದಕ್ಕಾಗಿ ಗೌಡ್ರು ಹಿತ್ಲಿಂದ ಹಿಡಿದು ಬೇಲಿಸಾಲ್ಗುಳಾಗೆಲ್ಲಾ ಹುಡ್ಕೊಂಡು ಹೋಗ್ಬೇಕು. ಪತ್ತೂರೋರ ಮನಿಗೊ ಇಲ್ಲಾ ಅಪ್ಪರ್ಮನಿಗೋಗಿ ಕೆಕ್ಕರ್ಲೆಹಣ್ಣು ಸಿಗ್ಲೇಯಿಲ್ಲ. ನಿಮ್ಮನಿಯಾಗಿದ್ರೆ ಚೂರು ಕೊಡ್ರಿ ಅಂತ ಇಸ್ಕಂಡ್ಬಾರೋದು. ಅವ್ರು ನಮ್ಮನಿಗ್ಬಂದು ನುಗ್ಗಿಕಾಯಿ, ಬದ್ನಿಕಾಯಿ ಕೊಡ್ರಿ ಅಂತ ಬರೋರು. ಎಲ್ಲಾ ಸೇರಿಸಿ ಸಣ್ಣಗೆ ಹೆಚ್ಚಿ, ಬೆಳಗಿನ ಜಾವಕ್ಕೆ ಅಕ್ಕಿ ಜೊತೆ ಬೇಯಿಸಬೇಕು. ಭೂಮ್ತಾಯಿಯ ಬಯಕೆ ಪೂರೈಸೋಕೆ ಎಲ್ಲಾ ಸೇರ್ಸೋದು. ಅದ್ಕೆ ಚರಗ ಅನ್ನೋರು. ಆಮ್ಯಾಲೆ ಮನಿ ಸುತ್ತೊರ್ಗು, ಹಿಂತ್ಲುಗೆ, ನಮ್ಮ ಗದ್ದಿಗುಳು ಎಲ್ಲೆಲ್ಲಿ ಇದಾವೊ ಅಲ್ಲೆಲ್ಲಾ ಹೂಲಗ್ಯಾ... ಹೂಲಗ್ಯಾ ಅಂತ ಕೂಗ್ತಾ ಚರಗ ಚೆಲ್ಲೊರು. ಎಲ್ಲಾ ಒಳ್ಳೆದಾಗ್ಲಿ, ಹೆಚ್ಚಾಗ್ಲಿ ಅಂತ ಅರ್ಥ. ರಾತ್ರಿಯೆಲ್ಲಾ ಅಡ್ಗೆ ಮಾಡೊ ಹಬ್ಬಾಂದ್ರೆ ಇದೆ. ಎಲ್ರು ಮನಿಗುಳಾಗೂ ಎಚ್ಚರಯಿದ್ದು, ಹಗಲೊತ್ತು ಓಡಾಡಿದಂಗೆ

### ಪದಗಳ ಅರ್ಥ

ಬೆಳ್ಗರಿಯಾದು – ಬೆಳಗಾಗುವುದು
ಓಿತ್ತಿತಂತೆ – ಓದುತ್ತಿದರಂತೆ
ಅನ್ನಾಕತ್ತದ – ಅಂದ ಶರಣರನಾಡು
ಪಾಡಿದಿಯಾ – ಭಾಷೆ ಚೆನ್ನಾಗಿದ್ದೀಯಾ
ಕುನ್ರಿಸೋರು – ಕೂರಿಸುವರು
ಹಲ್ಗಿ– ಹಲಗೆ (ಚರ್ಮದ ವಾದ್ಯ )
ಓಟ್ಟ ಕೀಳೋರು – ಓಡಿ ಹೋಗುವರು
ಬ್ಯಾದ – ಬೇಧ
ಮಾರ್ನೋಮಿ – ಶಿಕಾರಿಪುರದ ಮಹಾನವಮಿ
ಮಕ್ಕಂಡು – ಮಲಗಿಕೊಂಡು
ತರುಬಿ – ತಡೆದು
ದುಪ್ಟಿ – ಬೆಡ್ ಶೀಟ್
ಹೂಲಗ್ಯಾ – ಹುಲುಸಾಗಲಿ
ಹಟ್ಟಿಹಬ್ಬ – ದೀಪಾವಳಿ
ಬಕ್ಕಣ್ಣ – ಜೇಬು
ಕಡ್ಡಿಪಟ್ನ – ಬೆಂಕಿಪೊಟ್ಟಣ
ಆಯ –ವರ್ಷಕ್ಕೆ ಕೊಡುವ ಭತ್ತ
ಅಲಿದೇವ್ರು – ಅಲ್ಲಾದೇವರು
ಮುಗ್ಲು – ಮುಗಿಲು
ತೋಪಿ – ಟೋಪಿ